

ಸತೀಶನ ಮನೆಯಲ್ಲಿ ಅವನೊಂದಿಗೆ ಕುಳಿತು ಕಾಫಿ ಕುಡಿದ ಹುಚ್ಚೇಗೌಡ, ಕೆಲಕಾಲ ಲೋಕಾಭಿರಾಮವಾಗಿ ಮಾತಾಡಿದ. ‘ನೀನು ದಶಕಗಳ ಕಾಲ ಸಾಹಿತ್ಯದ ಕೆಲಸ ಮಾಡಿದೀಯ. ಇಷ್ಟೆಲ್ಲಾ ಪುಸ್ತಕ ಬರೆದಿದ್ದೀಯಾ. ಆದರೆ ನಿನಗೆ ಸಂಕೋಚ ಜಾಸ್ತಿ. ನಿನ್ನನ್ನ ನೀನು ಪ್ರೊಜೆಕ್ಟ್ ಮಾಡಿಕೊಳ್ಳೋದಕ್ಕೆ ಗೊತ್ತಿಲ್ಲ. ಇಲ್ಲವಾದಲ್ಲಿ ನೀನು ಯಾವ ಯಾವುದೋ ಅವಾರ್ಡ್ ತೆಗೆದುಕೊಂಡು ಎಲ್ಲಿಗೋ ತಲುಪಿಬಿಡುತ್ತಿದ್ದೆ’ ಎಂದು ಹೊಗಳಿ ಸತೀಶನನ್ನು ಅಟ್ಟಕ್ಕೇರಿಸಲು ನೋಡಿದ.

ನಂತರ, ‘ಮುಂದಿನ ರಾಜ್ಯೋತ್ಸವದ ಹೊತ್ತಿಗೆ ಚಂಪಕನಗರ ತಾಲೂಕಿನಲ್ಲಿ ನಿನ್ನ ಸಾಹಿತ್ಯದ ಕುರಿತು ಒಂದು ವಿಚಾರ ಸಂಕಿರಣ ಏರ್ಪಡಿಸೋಣ. ಅಲ್ಲಿ ನಮ್ಮ ಸ್ನೇಹಿತನದೇ ‘ಮಲ್ನಾಡ್ ಕಾಮರ್ಸ್ ಕಾಲೇಜ್’ ಇದೆ. ಅಲ್ಲಿ ಇಂತಹ ಸಾಂಸ್ಕೃತಿಕ ಸಮಾರಂಭ ಆಗಾಗ ಏರ್ಪಡಿಸುತ್ತಿರುತ್ತಾರೆ. ನಾನು ಅವರಿಗೆ ಹೇಳುತ್ತೇನೆ. ಅವತ್ತು ಸಂಪಾದಕ ಶ್ರೀನಿವಾಸ ಮೂರ್ತಿ, ರುದ್ರೇಗೌಡರು ಅಂತಹ ಪ್ರಮುಖರನ್ನು ಕರೆಸಬಹುದು. ನೀನೇನೂ ಯೋಚನೆ ಮಾಡುವುದು ಬೇಡ. ಅತಿಥಿಗಳ ಊಟದ ವ್ಯವಸ್ಥೆಯೆಲ್ಲಾ ನಾನೇ ನೋಡಿಕೊಳ್ಳುತ್ತೇನೆ. ಅಲ್ಲಿ ಹತ್ತಿರದಲ್ಲೇ ನಮ್ಮ ಸ್ನೇಹಿತರದೇ ರೆಸಾರ್ಟ್ ಇದೆ’ ಎಂದು ಹುರಿದುಂಬಿಸುವ ಮಾತಾಡಿದ.

‘ನೋಡೋಣ, ಇರ್ಲಿ... ಮತ್ತೆ ನಿನ್ನ ವಿಚಾರ ಹೇಳು’ ಎಂದಿದ್ದ ಹೊಸಳ್ಳಿ ಸತೀಶ.

ಆಗ ಹುಚ್ಚೇಗೌಡ ತನ್ನ ಬ್ಯಾಗಿನಲ್ಲಿದ್ದ ಲೇಖನಗಳನ್ನು ತೆಗೆದು ಸತೀಶನ ಕೈಲಿ ಕೊಡುತ್ತಾ ‘ನಾನೂ ಇತ್ತೀಚೆಗೆ ಬರೆಯಲು ಶುರು ಮಾಡಿದೀನಿ. ಈ ಲೇಖನಗಳನ್ನೆಲ್ಲ ‘ಮಲೆಯಾದ್ರಿಯ ಕೂಗು’ ಪತ್ರಿಕೆಗೆ ಕಳಿಸಿಕೊಟ್ಟಿದ್ದೇನೆ. ಬಹಳ ದಿನ ಆಯಿತು. ಅವರು ಗಮನವನ್ನೇ ಹರಿಸಿಲ್ಲ. ನೀನೊಂದು ಮಾತು ಹೇಳು ಆ ಪಂಕಜಮ್ಮನಿಗೆ. ಅವಳೇನೋ ದುಡ್ಡಿಗೆ ಬಾಯಿ ಬಿಡ್ತಾಳೆ ಅಂತ ಹೇಳ್ತಾರೆ. ಬೇಕಾದ್ರೆ ಏನಾದ್ರೂ ಕೊಡೋಣ’ ಎಂದ.



ಆ ಮಾತುಗಳು ಸತೀಶನಿಗೆ ಹಿಡಿಸಿದಂತೆ ತೋರಲಿಲ್ಲ. ಕೆಲಕಾಲ ಅವನು ಕೊಟ್ಟಿದ್ದ ಲೇಖನಗಳಲ್ಲಿ ಒಂದನ್ನು ಓದಿ ‘ನೀನು ಇನ್ನು ಸ್ವಲ್ಪ ಕಾಲ ಕೈ ಪಳಗಿಸಿಕೊಳ್ಳಬೇಕು. ಎಂ.ಎ ಓದಿದ ನಂತರ ನೀನು ಯಾವುದೇ ಸಾಹಿತ್ಯದ ಪುಸ್ತಕ ಓದಿದಂತೆ ತೋರುತ್ತಿಲ್ಲ. ಕುವೆಂಪು, ಕಾರಂತ, ಭೈರಪ್ಪ, ತೇಜಸ್ವಿ ಮುಂತಾದವರ ಸಾಹಿತ್ಯವನ್ನೊಮ್ಮೆ ಓದಿಕೋ. ಅಷ್ಟೇ ಅಲ್ಲದೆ ಕನ್ನಡ ಸಾಹಿತ್ಯದಲ್ಲಿ ಕಾಲ ಕಾಲಕ್ಕೆ ಒಳ್ಳೊಳ್ಳೆಯ ಕೃತಿಗಳು ಬಂದಿವೆ. ಅವನ್ನೆಲ್ಲಾ ಓದಿಕೊಳ್ಳಬೇಕು. ನೀನು ಯಾವ ಪ್ರಕಾರದಲ್ಲಿ ಬರೆಯುತ್ತಿದ್ದೀಯ. ಕಥೆಯೋ, ಕಾದಂಬರಿಯೋ, ಪ್ರಬಂಧವೋ ಎಂಬ ಅರಿವಿರಬೇಕಾದುದು ಮುಖ್ಯ’ ಎಂದು ಸತೀಶ ಬುದ್ಧಿಮಾತು ಹೇಳಿ ಕಳಿಸಿದ್ದ.

‘ಅದ ಹೇಳಕೆ ಅವ್ರೇ ಆಗ್ಬೇಕಂತಾ. ಹಂಗಾಗ ಹೊತ್ಗೇ ಅವ್ರು ಕೂತಲ್ಲೇ ಕೂತಿರದು... ನಾಳೆ ಸಂಜೆ ‘ನಕ್ಷತ್ರ’ದ ಹತ್ರ ಸಿಕ್ಕೋಗಿ ಗೌಡ್ರೆ. ಏನಾದ್ರೂ ದಾರಿ ಯೋಚ್ನೆ ಮಾಡಿರ್ತೀನಿ’ ಎಂದಿದ್ದ ವರದರಾಜ, ಹುಚ್ಚೇಗೌಡನ ಮಾತು ಕೇಳಿಸಿಕೊಂಡ ನಂತರ.

ಮರುದಿನ ‘ನಕ್ಷತ್ರ’ ದಲ್ಲಿ ಸಮಾರಾಧನೆ ಚೆನ್ನಾಗಿಯೇ ಆಯಿತು. ಅರ್ಧ ಕ್ವಾರ್ಟರಿನ ಜೊತೆಗೆ ಮತ್ತೆ ಮೂವತ್ತು ಎಂ.ಎಲ್ ತರಿಸಿಕೊಂಡು ಕುಡಿದ ವರದರಾಜ, ‘ಇದೆಂತಾ ಹೆಸರು ಗೌಡ್ರೆ ನಿಮ್ದು? ಅದೆಂತದು ಗೊಚ್ಚೆಗುಂಡಿ? ಅವೆರಡನ್ನು ಬಿಟ್ಟಾಕಿ ಬೇರೆ ಏನಾದ್ರೂ ಹೆಸರಿಟ್ಗಂಡು ಬರೀರಿ’ ಎಂದ.

ಹುಚ್ಚೇಗೌಡ ತಬ್ಬಿಬ್ಬಾದವನಂತೆ ಕುಳಿತದ್ದು ಕಂಡು ಅವನೇ ‘ಮದನ್ ಕುಮಾರ್ ಅಂತ ಇಟ್ಗಳ್ರಿ. ಬೇಕಾದ್ರೆ ಜೊತೆಗೆ ಊರಲ್ಲಿ ನಿಮ್ಮನೆ ಹೆಸರಿದೆಯಲ್ಲ ‘ಹೊಸ್ಮನೆ’ ಅಂತಾ ಅಲ್ವಾ, ಅದನ್ನು ಸೇರಿಸ್ಕೊಳ್ಳಿ’ ಎಂದು ಸಲಹೆ ನೀಡಿದ.

‘ಹೊಸ್ಮನೆ ಮದನ್ ಕುಮಾರ್’ ಹೆಸರು ಹುಚ್ಚೇಗೌಡನಿಗೆ ಒಪ್ಪಿಗೆ ಆಯಿತು.

‘ಅದಿರ್ಲಿ. ಎಲ್ಲಿ ನಿಮ್ಮ ಮೊಬೈಲ್ ತೆಗೀರಿ’ ಎಂದ.

‘ಇದೇನಪ್ಪ’ ಎಂದುಕೊಳ್ಳುತ್ತಾ ಹುಚ್ಚೇಗೌಡ ತನ್ನ ಕೀಪ್ಯಾಡ್ ಮೊಬೈಲ್ ತೆಗೆದು ಅವನ ಮುಂದೆ ಹಿಡಿದ.

ಅದನ್ನು ತೆಗೆದು ಕೈಯಲ್ಲಿ ಹಿಡಿದು ಅತ್ತಿತ್ತ ಹೊರಳಿಸಿ ನೋಡಿದ ವರದರಾಜ, ‘ಅಯ್ಯೋ